ಸಮಾಜ ವಿಜ್ಞಾನ

## ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ

# “ ಬಸವ ಸ್ಫೂರ್ತಿ ”

–:ರಚನೆ:–

ಶ್ರೀ ಎಸ್.ಬಿ.ಹೆಳವರ

ಶ್ರೀ ಗುರು ಮಂಟೇಶ್ವರ ಪ್ರೌಢ ಶಾಲೆ

ಕೆಲೂರ

ಶ್ರೀ ಎಮ್.ಡಿ.ಮಠಪತಿ

ಶ್ರೀ ಬಸವೇಶ್ವರ ಪ್ರೌಢ ಶಾಲೆ

ಬರಗಿ

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

1) ಭಾರತೀಯ ಸಮಾಜ ಸುಧಾರಣೆಗೆ ಫುಲೆ ದಂಪತಿಗಳ ಕೊಡುಗೆಗಳೇನು?
2) ಪ್ರಾರ್ಥನಾ ಸಮಾಜದ ಬೋಧನೆಗಳು ಯಾವುವು?
3) ಆರ್ಯ ಸಮಾಜವು ಭಾರತೀಯ ಸಮಾಜ ಸುಧಾರಣೆಗೆ ಹೇಗೆ ಶ್ರಮಿಸಿತು?
4) ಆಲಿಘರ್ ಚಳುವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ.
5) ರಾಮಕೃಷ್ಣ ಮಿಷನ್ ಕೈಗೊಂಡ ಸಾಮಾಜಿಕ ಸುಧಾರಣಾಕ್ರಮಗಳಾವುವು?
6) ಸತ್ಯ ಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳೇನು?
7) ರಾಜಾರಾಮ್ ಮೋಹನ್ ರಾಯರು "ಭಾರತೀಯ ರಾಷ್ಟ್ರೀಯತೆಯ ಪ್ರವಾದಿ" ಈ ಹೇಳಿಕೆಯನ್ನು ವಿಶ್ಲೇಷಿಸಿ.
8) 19ನೇ ಶತಮಾನವನ್ನು ಭಾರತೀಯ ನವೋದಯ ಕಾಲವೆಂದು ಕರೆಯುತ್ತಾರೆ.ಏಕೆ?
9) ರಾಜಾ ರಾಮ್ ಮೋಹನ್‌ರಾಯರನ್ನು 'ಭಾರತದ ಪುನರುಜ್ಜೀವನದ ಜನಕ' ಎಂದು ಕರೆಯಲು ಕಾರಣವೇನು?
10) ಭಾರತೀಯ ಸಮಾಜ ಸುಧಾರಣೆಗೆ ಹೆನ್ರಿ ವಿವಿಯನ್ ಡಿರೋಜಿಯೋ ಹೇಗೆ ಶ್ರಮಿಸಿದರು?
11) ಬ್ರಹ್ಮ ಸಮಾಜದ ಬೋಧನೆಗಳನ್ನು ವಿವರಿಸಿ.

- ★ ಸ್ತ್ರೀ ಶೋಷಣೆ ವಿರೋಧ.
- ★ ಬಾಲ್ಯವಿವಾಹ,ಬಹುಪತ್ನಿತ್ವ ವಿರೋಧ.
- ★ ಜಾತಿಪದ್ಧತಿ ನಿಷೇಧ.
- ★ ಅರ್ಥಹೀನ ಆಚರಣೆಗಳ ವಿರೋಧ.
- ★ ವಿಧವಾ ವಿವಾಹಕ್ಕೆ ಪ್ರೋತ್ಸಾಹ.
- ★ ಸಮಾನತೆಗೆ ಆದ್ಯತೆ.
- ★ ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ.

## ಭಾರತದ ನೈಸರ್ಗಿಕ ವಿಪತ್ತುಗಳು

**1.ಆವರ್ತ ಮಾರುತಗಳು 2.ಪ್ರವಾಹಗಳು 3.ಭೂಕುಸಿತಗಳು**
**4.ಸಮುದ್ರ ತೀರದ ಕೊರೆತ 5.ಭೂಕಂಪಗಳು**

**ಕಾರಣಗಳು**

1) ಕೆಲವು ಪರ್ವತಗಳ ಇಳಿಜಾರುಗಳು ಆಗಿಂದ್ದಾಗೆ ಕುಸಿತಕ್ಕೆ ಒಳಗಾಗುತ್ತವೆ.ಏಕೆ? (ಕಾರಣಗಳು)
2) ಭಾರತದಲ್ಲಿ ಸಮುದ್ರ ಕೊರೆತಕ್ಕೆ ಕಾರಣವಾಗಿರುವ ನೈಸರ್ಗಿಕ ಮತ್ತು ಮಾನವ ನಿರ್ಮಿತ ಕೃತ್ಯಗಳಾವುವು?(ಕಾರಣಗಳು)
3) ಕೆಲವೊಮ್ಮೆ ನದಿಗಳು ತಮ್ಮ ದಂಡೆಗಳಾಚೆಗೂ ಉಕ್ಕಿ ಹರಿಯಲು ಕಾರಣಗಳೇನು?
4) ಸಮುದ್ರ ಕೊರೆತವು ತೀರ ಪ್ರದೇಶದ ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತದೆ. ಹೇಗೆ?(ಕಾರಣಗಳು)
5) ಸಮುದ್ರತೀರದ ಸವೆತಕ್ಕೆ ಪ್ರಮುಖ ಕಾರಣಗಳೇನು?
6) ಪ್ರವಾಹಗಳು ಉಂಟಾಗಲು ಕಾರಣಗಳೇನು?
7) ಭೂಕುಸಿತಕ್ಕೆ ಕಾರಣಗಳನ್ನು ಪಟ್ಟಿಮಾಡಿ.

- ★ ನಗರೀಕರಣ
- ★ ಗಣಿಗಾರಿಕೆ
- ★ ಪರಿಸರ ಮಾಲಿನ್ಯ
- ★ ರೈಲು ಮತ್ತು ರಸ್ತೆಗಳ ನಿರ್ಮಾಣ
- ★ ಆಧುನೀಕರಣ
- ★ ಅತ್ಯಧಿಕ ಮಳೆ
- ★ ಆಣೆಕಟ್ಟುಗಳ ನಿರ್ಮಾಣ
- ★ ಜಲವಿದ್ಯುತ್ ಯೋಜನೆಗಳ ನಿರ್ಮಾಣ.

## ಭಾರತದ ನೈಸರ್ಗಿಕ ವಿಪತ್ತುಗಳು

1.ಆವರ್ತ ಮಾರುತಗಳು 2.ಪ್ರವಾಹಗಳು 3.ಭೂಕುಸಿತಗಳು
4.ಸಮುದ್ರ ತೀರದ ಕೊರೆತ 5.ಭೂಕಂಪಗಳು

### ಪರಿಣಾಮಗಳು

1)ಬಹುದೊಡ್ಡ ಅಣೆಕಟ್ಟು ಮತ್ತು ಜಲಾಶಯಗಳ ನಿರ್ಮಾಣಕ್ಕೆ ನಿಷೇಧ ಹೇರಬೇಕು.ಏಕೆ?(ಪರಿಣಾಮಗಳು)

2) ಉಷ್ಣವಲಯದ ಆವರ್ತ ಮಾರುತಗಳು ಬಹಳ ವಿನಾಶಕಾರಿಯಾದವುಗಳು. ಹೇಗೆ?(ಪರಿಣಾಮಗಳು)

3) ನದಿಗಳು ಉಕ್ಕಿ ಹರಿಯುವುದರಿಂದ ಉಂಟಾಗುವ ಪರಿಣಾಮಗಳೇನು?

4) ಭೂಕುಸಿತಗಳು ನೈಸರ್ಗಿಕ ವಿನಾಶಕಾರಿ ವಿಪತ್ತುಗಳಾಗಿವೆ. ಹೇಗೆ?(ಪರಿಣಾಮಗಳು)

5) ಪ್ರವಾಹಗಳ ಬಗ್ಗೆ ಮುನ್ಸೂಚನೆ ಮತ್ತು ಸಕಾಲಿಕ ಮುನ್ನೆಚ್ಚರಿಕೆ ನೀಡುವುದು ಅತ್ಯಗತ್ಯ ಏಕೆ?(ಪರಿಣಾಮಗಳು)

6) ಭೂಚಿಪ್ಪಿನಲ್ಲಾಗುವ ರಭಸವಾದ ಕಂಪನವು ಸಾಕಷ್ಟು ಅನಾಹುತಗಳಿಗೆ ಕಾರಣವಾಗುತ್ತದೆ.ಸಮರ್ಥಿಸಿ.(ಪರಿಣಾಮಗಳು)

- ★ ಜೀವ ಹಾನಿ
- ★ ಆಸ್ತಿ ನಾಶ
- ★ ಬೆಳೆ ಹಾನಿ
- ★ ಸಾಂಕ್ರಾಮಿಕ ರೋಗಗಳ ಹರಡುವಿಕೆ.
- ★ ಮಣ್ಣಿನ ಸವೇತ
- ★ ಸಾರಿಗೆ ಸಂಪರ್ಕ ಹಾನಿ.
- ★ ವಿದ್ಯುತ್ ಸರಬರಾಜಿಗೆ ಅಡಚಣೆ
- ★ ಮೂಲಭೂತ ಸೌಲಭ್ಯಗಳಿಗೆ ವ್ಯತ್ಯಯ

## ಭಾರತದ ನೈಸರ್ಗಿಕ ವಿಪತ್ತುಗಳು

1.ಆವರ್ತ ಮಾರುತಗಳು 2.ಪ್ರವಾಹಗಳು 3.ಭೂಕುಸಿತಗಳು
4.ಸಮುದ್ರ ತೀರದ ಕೊರೆತ 5.ಭೂಕಂಪಗಳು

### ಪರಿಹಾರಗಳು

- ★ ತುರ್ತು ರಕ್ಷಣಾ ಕಾರ್ಯ
- ★ ವೈದ್ಯಕೀಯ ನೆರವು
- ★ ಪುನರ್ವಸತಿ ವ್ಯವಸ್ಥೆ
- ★ ಸಾಂಕ್ರಾಮಿಕ ರೋಗಗಳ ನಿಯಂತ್ರಣ
- ★ ಆಹಾರ ನೀರು ಪೂರೈಕೆ
- ★ ಮೂಲಭೂತ ಸೌಲಭ್ಯಗಳ ವ್ಯವಸ್ಥೆ.
- ★ ತಾತ್ಕಾಲಿಕ ಆಶ್ರಯ ಕಲ್ಪಿಸುವುದು.

### ಮುನ್ನೆಚ್ಚರಿಕಾ ಕ್ರಮಗಳು

- ★ ಅರಣ್ಯಗಳನ್ನು ಬೆಳೆಸುವುದು
- ★ ಪರಿಸರ ಸಂರಕ್ಷಣೆ
- ★ ಗಣಿಗಾರಿಕೆ ನಿಷೇಧ
- ★ ನಗರೀಕರಣದ ನಿಯಂತ್ರಣ
- ★ ವೈಜ್ಞಾನಿಕ ಬೇಸಾಯ ಮತ್ತು ಕೃಷಿ ಪದ್ಧತಿ
- ★ ಮಾಧ್ಯಮಗಳಲ್ಲಿ ಮಾಹಿತಿ ಭಿತ್ತರಿಸುವುದು

## ಸಾಮಾಜಿಕ ಸಮಸ್ಯೆಗಳು

**1.ಬಾಲಕಾರ್ಮಿಕ ಪದ್ಧತಿ 2.ಹೆಣ್ಣು ಭ್ರೂಣ ಹತ್ಯೆ 3.ಹಸಿವು 4.ಲೈಂಗಿಕ ದೌರ್ಜನ್ಯ 5.ಲಿಂಗ ತಾರತಮ್ಯ 6.ಬಾಲ್ಯ ವಿವಾಹ 7.ಮಕ್ಕಳ ಸಾಗಾಣಿಕೆ**

### ಕಾರಣಗಳು

1) ಬಾಲ್ಯ ವಿವಾಹವು ಮಕ್ಕಳ ಶೋಷಣೆಗೆ ಹೇಗೆ ಕಾರಣವಾಗಿದೆ?

2) ಮಕ್ಕಳ ದುಡಿಮೆಯು ಅವರ ಹಕ್ಕುಗಳನ್ನುಕಸಿದುಕೊಳ್ಳುತ್ತದೆ.ಹೇಗೆ?(ಕಾರಣಗಳು)

3) ಭಾರತದಲ್ಲಿ ಇಂದು ಲಿಂಗ ತಾರತಮ್ಯತೆಯು ಅನೇಕ ಸವಾಲುಗಳನ್ನು ತಂದೊಡ್ಡುತ್ತಿದೆ.ವಿಶ್ಲೇಷಿಸಿ.(ಕಾರಣಗಳು)

- ★ ಬಡತನ
- ★ ಕೃಷಿ ಸಮಾಜದ ಬಿಕ್ಕಟ್ಟುಗಳು
- ★ ಅನಕ್ಷರತೆ
- ★ ಪೋಷಕರ ದುಷ್ಚಟಗಳು
- ★ ಸಾಲದ ಹೊರೆ
- ★ ಅಜ್ಞಾನ
- ★ ಸ್ತ್ರೀ ಅಮಾನತೆ
- ★ ಕಾನೂನಿನ ಕಳಪೆ ಅನುಷ್ಠಾನ

## ಸಾಮಾಜಿಕ ಸಮಸ್ಯೆಗಳು

**1.ಬಾಲಕಾರ್ಮಿಕ ಪದ್ಧತಿ 2.ಹೆಣ್ಣು ಭ್ರೂಣ ಹತ್ಯೆ 3.ಹಸಿವು 4.ಲೈಂಗಿಕ ದೌರ್ಜನ್ಯ 5.ಲಿಂಗ ತಾರತಮ್ಯ 6.ಬಾಲ್ಯ ವಿವಾಹ 7.ಮಕ್ಕಳ ಸಾಗಾಣಿಕೆ**

### ಪರಿಣಾಮಗಳು

1) ಬಾಲ್ಯ ವಿವಾಹದಿಂದ ಉಂಟಾಗುವ ದುಷ್ಪರಿಣಾಮಗಳು ಯಾವುವು?

2) ಬಾಲ ಕಾರ್ಮಿಕರನ್ನು ದುಡಿಮೆಗೆ ಇಟ್ಟುಕೊಳ್ಳುವುದು ಅಪರಾಧ.ಏಕೆ?(ಪರಿಣಾಮಗಳು)

3) ಶಾಲೆಗಳಲ್ಲಿ ಕಡ್ಡಾಯವಾಗಿ 'ಮಕ್ಕಳ ಹಕ್ಕುಗಳ ಕ್ಲಬ್' ರಚಿಸಿ ಅನುಷ್ಠಾನಕ್ಕೆ ತರುವುದು ಅತ್ಯಗತ್ಯ.ಏಕೆ?(ಪರಿಣಾಮಗಳು)

4) ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ಒಂದು ಸಾಮಾಜಿಕ ಪಿಡುಗಾಗಿದೆ. ಸಮರ್ಥಿಸಿ.(ಪರಿಣಾಮಗಳು)

5) ಹೆಣ್ಣು ಭ್ರೂಣ ಹತ್ಯೆ ಕಾನೂನು ಬಾಹೀರ ಮತ್ತು ಅಪರಾಧ.ಏಕೆ? (ಪರಿಣಾಮಗಳು)

6) ಹೆಣ್ಣು ಭ್ರೂಣ ಹತ್ಯೆಯು ಅನೇಕ ದುಷ್ಪರಿಣಾಮಗಳನ್ನು ಹುಟ್ಟು ಹಾಕುತ್ತದೆ. ಈ ಹೇಳಕೆಯನ್ನು ಸ್ಪಷ್ಟೀಕರಿಸಿ.

7) ಬಾಲಕಾರ್ಮಿಕ ಪದ್ಧತಿ ಒಂದು ಸಾಮಾಜಿಕ ಪಿಡುಗಾಗಿದೆ.ಹೇಗೆ?

- ★ ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತ
- ★ ಮಕ್ಕಳ ಮೇಲಿನ ದೌರ್ಜನ್ಯ
- ★ ಮಕ್ಕಳ ಹಕ್ಕುಗಳ ಉಲ್ಲಂಘನೆ
- ★ ಸಾಮಾಜಿಕ ಭದ್ರತೆಯ ಕೊರತೆ
- ★ ಅನಕ್ಷರತೆ ಹೆಚ್ಚಳ
- ★ ಮಕ್ಕಳ ಮಾನಸಿಕ ಶೋಷಣೆ

## ಸಾಮಾಜಿಕ ಸಮಸ್ಯೆಗಳು

1.ಬಾಲಕಾರ್ಮಿಕ ಪದ್ಧತಿ 2.ಹೆಣ್ಣು ಭ್ರೂಣ ಹತ್ಯೆ 3.ಹಸಿವು 4.ಲೈಂಗಿಕ ದೌರ್ಜನ್ಯ 5.ಲಿಂಗ ತಾರತಮ್ಯ 6.ಬಾಲ್ಯ ವಿವಾಹ 7.ಮಕ್ಕಳ ಸಾಗಾಣಿಕೆ

### ಪರಿಹಾರ ಕ್ರಮಗಳು

1) ಬಾಲ್ಯ ವಿವಾಹ ನಿಯಂತ್ರಣ ಕ್ರಮಗಳಾವುವು?

2) ಭಾರತದಲ್ಲಿ ಮಕ್ಕಳ ದುಡಿಮೆಯ ನಿರ್ಮೂಲನೆಗೆ ಇರುವ ಪರಿಹಾರ ಕ್ರಮಗಳೇನು?

3) ಬಾಲ ಕಾರ್ಮಿಕ ಸಮಸ್ಯೆಗೆ ಪರಿಹಾರೋಪಾಯಗಳಾವುವು?

4) ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ನಿಯಂತ್ರಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

- ಕಠಿಣ ಕಾನೂನುಗಳ ಜಾರಿ
- ಮಕ್ಕಳ ಶಿಕ್ಷಣಕ್ಕೆ ಒತ್ತು
- ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ರಚನೆ
- ಮಕ್ಕಳ ಸುರಕ್ಷತಾ ಸಮಿತಿ ರಚನೆ
- ಮಕ್ಕಳ ಗ್ರಾಮ ಸಭೆ ನಡೆಸುವುದು
- ಬಾಲಿಕಾ ಸಂಘಗಳ ಸ್ಥಾಪನೆ
- ಸಾಮಾಜಿಕ ಮೌಲ್ಯಗಳ ಬಗ್ಗೆ ಜಾಗೃತಿ
- ವಲಸೆ ನಿಯಂತ್ರಿಸುವುದು

## ಭಾರತದ ಕೈಗಾರಿಕೆಗಳು

1.ಕೈಗಾರಿಕೆ 2.ಕಬ್ಬಿನ ಕೈಗಾರಿಕೆ 3.ಅಲ್ಯುಮಿನಿಯಂ ಕೈಗಾರಿಕೆ 4.ಹತ್ತಿ ಬಟ್ಟೆ ಕೈಗಾರಿಕೆ

5.ಸಕ್ಕರೆ ಕೈಗಾರಿಕೆ 6.ಕಾಗದ ಕೈಗಾರಿಕೆ

### ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು ಹಾಗೂ ಕೈಗಾರಿಕೆಗಳು ಒಂದೆ ಸ್ಥಳದಲ್ಲಿ ಹೆಚ್ಚು ಕೇಂದ್ರಿಕೃತವಾಗಲು ಪ್ರಮುಖ ಅಂಶಗಳು

1) ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
2) ಹತ್ತಿ ಬಟ್ಟೆ ಕೈಗಾರಿಕೆಗಳು ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.ಏಕೆ?
3) ಭಾರತದಲ್ಲಿ ಕೈಗಾರಿಕೆಗಳು ಕೆಲವು ಪ್ರದೇಶಗಳಲ್ಲಿ ಮಾತ್ರ ಸೀಮಿತಗೊಂಡಿವೆ.ಏಕೆ?
4) ಮುಂಬೈ ನಗರವು ಇಂದಿಗೂ ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾಗಿದೆ.ಏಕೆ?
5) ಭಾರತದ ಕಾಗದ ಕೈಗಾರಿಕೆಗಳು ಪಶ್ಚಿಮ ಬಂಗಾಳದ ಹೂಗ್ಲಿ ನದಿ ಬಯಲಿನಲ್ಲಿ ಅಭಿವೃದ್ಧಿಗೊಂಡಿದ್ದವು.ಏಕೆ?
6) ಮಹಾರಾಷ್ಟ್ರ,ಉತ್ತರ ಪ್ರದೇಶ ಮತ್ತು ಕರ್ನಾಟಕಗಳಲ್ಲಿ ಹೆಚ್ಚು ಸಕ್ಕರೆ ಕೈಗಾರಿಕೆಗಳು ಕೇಂದ್ರಿಕೃತವಾಗಿವೆ. ಏಕೆ?
7) ಅಲ್ಯೂಮಿನಿಯಂ ಕೈಗಾರಿಕೆಗೆ ಬೇಕಾಗುವ ಸ್ಥಾನೀಕರಣದ ಅಂಶಗಳಾವುವು?
8) ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಪ್ರಮುಖಾಂಶಗಳು ಯಾವುವು?
9) ಪಶ್ಚಿಮ ಬಂಗಾಳ ಮತ್ತು ಒಡಿಶಾಗಳಲ್ಲಿ ಹೆಚ್ಚು ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಕೇಂದ್ರಿಕೃತವಾಗಿವೆ. ಏಕೆ?

- ಕಚ್ಚಾ ವಸ್ತುಗಳ ಸರಬರಾಜು
- ಶಕ್ತಿ ಸಮಪನ್ಮೂಲಗಳ ಪೂರೈಕೆ
- ಸಾರಿಗೆ ವ್ಯವಸ್ಥೆ
- ಸಂಪರ್ಕ ವ್ಯವಸ್ಥೆ
- ಸೂಕ್ತ ವಾಯುಗುಣ
- ಮಾರುಕಟ್ಟೆ ಸೌಲಭ್ಯ
- ಬಂಡವಾಳ ಲಭ್ಯತೆ
- ಕಾರ್ಮಿಕರು ದೊರೆಯುವಿಕೆ
- ನೀರಿನ ಸೌಲಭ್ಯ
- ಸರ್ಕಾರದ ಉತ್ತಮ ನೀತಿಗಳು

### ಮಹತ್ವ, ಪ್ರಾಮುಖ್ಯತೆ, ಅನುಕೂಲತೆಗಳು

**1.ಕೃಷಿ 2.ಕೈಗಾರಿಕೆ 3.ಸಾರಿಗೆ 4.ಭಾರತದ ಆರ್ಥಿಕ ಅಭಿವೃದ್ಧಿ 5.ಉದ್ಯಮಗಾರಿಕೆ 6.ಗ್ರಾಮೀಣಾಭಿವೃದ್ಧಿ 7.ಸಾರ್ವಜನಿಕ ಹಣಕಾಸು 8.ಶಕ್ತಿ ಸಂಪನ್ಮೂಲಗಳು**

- ★ ರಾಷ್ಟ್ರೀಯ ಆದಾಯ ಹೆಚ್ಚಳ
- ★ ತಲಾ ಆದಾಯ ಹೆಚ್ಚಳ
- ★ ಜನರ ಜೀವನ ಮಟ್ಟದಲ್ಲಿಹೆಚ್ಚಳ
- ★ ಉದ್ಯೋಗವಕಾಶಗಳ ಸೃಷ್ಟಿ
- ★ ವಿದೇಶಿ ವಿನಿಮಯ ಗಳಿಗೆ
- ★ ವಿದೇಶಿ ವ್ಯಾಪಾರ ವೃದ್ಧಿ
- ★ ಕೃಷಿ ಅಭಿವೃದ್ಧಿ
- ★ ಕೈಗಾರಿಕಾ ಅಭಿವೃದ್ಧಿ
- ★ ಆರ್ಥಿಕ ವಲಯಗಳ ಪ್ರಗತಿ

### ಮಹತ್ವ, ಪ್ರಾಮುಖ್ಯತೆ, ಅನುಕೂಲತೆಗಳು

**ಖನಿಜ ಸಮಪನ್ಮೂಲಗಳ ಹಾಗೂ**

**1.ಕಬ್ಬಿಣ 2.ಮ್ಯಾಂಗನೀಸ್ 3.ಅಭ್ರಕ 4.ಅಲ್ಯುಮಿನಿಯಂ**

- ★ ದೇಶಗಳ ಸಮೃದ್ಧಿಯಲ್ಲಿ ಇವುಗಳ ಪಾತ್ರ ಮಹತ್ವದ್ದು
- ★ ಕೈಗಾರಿಕೆ ನಿರ್ಮಾಣ ಕಾರ್ಯಕ್ಕೆ ಅಗತ್ಯ.
- ★ ಸಾರಿಗೆ ಮತ್ತು ಸಂಪರ್ಕಗಳ ಪ್ರಗತಿಗೆ ಪೂರಕ
- ★ ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಗೆ ಉಪಯುಕ್ತ.
- ★ ವಿದ್ಯುತ್ ತಯಾರಿಕೆಯಲ್ಲಿ ಬಳಕೆ
- ★ ರಸಾಯನಿಕ ತಯಾರಿಕೆಯಲ್ಲಿ ಬಳಕೆ
- ★ ಬಣ್ಣ ಗಾಜು ತಯಾರಿಕೆಯಲ್ಲಿ ಬಳಕೆ
- ★ ಗೃಹ ಬಳಕೆ ವಸ್ತುಗಳ ತಯಾರಿಕೆಯಲ್ಲಿ

## ಜಾಗತಿಕರಣ

1) ಜಾಗತೀಕರಣವು ವಿಶ್ವದಾದ್ಯಂತ ಆರ್ಥಿಕ ಚಲನೆಯಾಗಿದೆ.ಈ ಹೇಳಿಕೆಯನ್ನು ಸಮರ್ಥಿಸಿ.

2) ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳು ಯಾವುವು?

3) ಜಾಗತೀಕರಣದ ಮುಖ್ಯ ಲಕ್ಷಣಗಳು ಯಾವುವು?

4) ಜಾಗತೀಕರಣದಿಂದ ಉಂಟಾಗುವ ಸಕಾರಾತ್ಮಕ ಪರಿಣಾಮಗಳನ್ನು ವಿವರಿಸಿ.

5) ಜಾಗತೀಕರಣದಿಂದಾಗುವ ಅನಕೂಲತೆಗಳು ಯಾವುವು?

6) ಜಾಗತಿಕರಣ ವಿಶ್ವದ ಆರ್ಥಿಕ ಚಲನೆಗೆ ಹೇಗೆ ಸಹಕಾರಿಯಾಗಿದೆ?

- ★ ಅಂತರಾಷ್ಟ್ರೀಯ ವ್ಯಾಪಾರದ ಹೆಚ್ಚಳ.
- ★ ಬಂಡವಾಳದ ಹರಿವು & ಹೂಡಿಕೆಯ ಹೆಚ್ಚಳ.
- ★ ಅಂತರಾಷ್ಟ್ರೀಯ ವ್ಯಾಪಾರ ಕರಾರುಗಳು ಸೃಷ್ಟಿ.
- ★ ಅಂತರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯ.
- ★ ಉತ್ಪಾದನೆಯಲ್ಲಿ ದಕ್ಷತೆ ಮತ್ತು ಗುಣಮಟ್ಟದ ಹೆಚ್ಚಳ.
- ★ ದೇಶದ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ.
- ★ ಸರಕು ಸೇವೆಗಳ ಮುಕ್ತ ಸಂಚಾರ.
- ★ ತಂತ್ರಜ್ಞಾನದ ವಿನಿಮಯ

## ಉದ್ಯಮಗಾರಿಕೆಯ ಲಕ್ಷಣಗಳು ಮತ್ತು ಕಾರ್ಯಗಳು

- ★ ಹೊಸ ಪದ್ಧತಿ ರೂಡಿಗೆ
- ★ ನಿರ್ಧಾರ ಕೈಗೊಳ್ಳುವುದು.
- ★ ಸೃಜನಾತ್ಮಕ ಸಂಯೋಜನೆ.
- ★ ನಷ್ಟ ಭರಿತಕ್ಕೆ ಸಿದ್ಧ.
- ★ ನಾಯಕತ್ವ ಗುಣ /ಮಾರ್ಗದರ್ಶನ ಗುಣ ಬೆಳವಣಿಗೆ.
- ★ ತಂಡ ಕಟ್ಟುವುದು.

## ಭಾರತದ ಜಲಸಂಪನ್ಮೂಲಗಳು

1) ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳನ್ನು ತಿಳಿಸಿರಿ.

2) ದೇಶದ ಅಭಿವೃದ್ಧಿಯಲ್ಲಿ ಜಲಸಂಪನ್ಮೂಲಗಳ ಪಾತ್ರವೇನು?

3) ಸರ್ಕಾರ ವಿವಿದೋದ್ದೇಶ ನದಿ ಕಣಿವೆ ಯೋಜನೆಗಳಿಗೆ ಒತ್ತು ನೀಡುತ್ತಿದೆ ಏಕೆ?

4) ದಾಮೋದರ/ಕೋಸಿ/ನಾಗಾರ್ಜುನ ಸಾಗರ/ಬಾಕ್ರಾ ನಂಗಲ್/ ಹಿರಾಕುಡ್/ತುಂಗಬದ್ರಾ ನದಿ ಕಣಿವೆ ಯೋಜನೆಯ ಉದ್ದೇಶಗಳೇನು?

- ★ ನೀರಾವರಿ ಪೂರೈಕೆ
- ★ ಜಲ ವಿದ್ಯುಚ್ಛಕ್ತಿ ಉತ್ಪಾದನೆ.
- ★ ಮೀನುಗಾರಿಕೆ
- ★ ಅರಣ್ಯ ಪೋಷಣೆ.
- ★ ಪ್ರವಾಹ ನಿಯಂತ್ರಣ.
- ★ ಒಳನಾಡಿನ ನೌಕಾಯಾನ.
- ★ ಮನರಂಜನೆ ಸೌಲಭ್ಯ.
- ★ ಮಣ್ಣಿನ ಸವೆತ ನಿಯಂತ್ರಣ.

## ಬ್ಯಾಂಕ್ ವ್ಯವಹಾರ

### ಬ್ಯಾಂಕಿನ ಕಾರ್ಯಗಳು, ಸೇವೆಗಳು, ಅನುಕೂಲಗಳು, ಲಕ್ಷಣಗಳು

- ಠೇವಣಿಗಳ ಅಂಗಿಕಾರ.
- ಸಾಲಗಳನ್ನು ಕೊಡುವುದು.
- ಸಾಲ ಪತ್ರಗಳನ್ನು ಪತ್ರಗಳನ್ನು ಕೊಡುವುದು.
- ಭದ್ರತಾ ಕಪಾಟು ಸೌಲಭ್ಯ.
- ಹಣದ ಭದ್ರತೆ.
- ಕ್ರೆಡಿಟ್ ಕಾರ್ಡು,ಜಮಾ ಕಾರ್ಡುಗಳ ಸೌಲಭ್ಯ.
- ಹಣದ ಪಾವತಿ ಮತ್ತು ವಸೂಲಿ.
- ಭರವಸೆಯ ಸೇವೆಗಳು

## ಭಾರತದ ಮೇಲ್ಮೈ ಲಕ್ಷಣಗಳು

1)ಉತ್ತರದ ಮೈದಾನದ ಪ್ರಾಮುಖ್ಯತೆಯನ್ನು ತಿಳಿಸಿ.

2) ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆ ಏನು?

3) ಪರ್ಯಾಯ ಪ್ರಸ್ಥಭೂಮಿಯು ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಹೇಳಿಕೆಯನ್ನು ಸಮರ್ಥಿಸಿರಿ.

4) ಭಾರತದ ಕರಾವಳಿ ಮೈದಾನಗಳ ಪ್ರಾಮುಖ್ಯತೆ ತಿಳಿಸಿ.

5) ಭಾರತದಲ್ಲಿ ಕೆಲವು ಭಾಗಗಳು ಅಧಿಕ ಜನಸಾಂದ್ರತೆಯನ್ನು ಹೊಂದಿರಲು ಕಾರಣಗಳೇನು?

6) ಭಾರತದ ಉತ್ತರದ ಮೈದಾನಗಳು ಹೆಚ್ಚು ಜನಸಾಂದ್ರತೆ ಹೊಂದಿವೆ.ಏಕೆ?

- ವಿಶಾಲ ಮೈದಾನ
- ಫಲವತ್ತಾದ ಮಣ್ಣು
- ಕೃಷಿಗೆ ಪೂರಕ
- ಅನೇಕ ನದಿಗಳು
- ನೀರಾವರಿ ಸೌಕರ್ಯ
- ಸಾರಿಗೆ ಮತ್ತು ಸಂಪರ್ಕಗಳ ಅಭಿವೃದ್ಧಿ
- ವ್ಯಾಪಾರಕ್ಕೆ ಪೂರಕ
- ಖನಿಜಗಳ ಉಗ್ರಾಣ

*ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಫಲಿತಾಂಶ ಉತ್ತಮಪಡಿಸಲು ಇದು ಒಂದು ಸ್ಫೂರ್ತಿ*.

*ಬಹು ನಿರೀಕ್ಷಿತ ಪ್ರಶ್ನೆಗಳನ್ನು ಒಳಗೊಂಡಿದೆ*.

*ಪ್ರತಿ ಪ್ರಶ್ನೆಗೆ ಸರಳ ಉತ್ತರಗಳು*.

## ಓದಿನ ಮೊದಲು/ಓದುವಾಗ ಗಮನಿಸ ಬೇಕಾದ ಕೆಲವು ಅಂಶಗಳು

★ಸರಿಯಾಗಿ ನಿದ್ದೆ ಮಾಡಿ.ನಿದ್ದೆ ಮಾಡದಿದ್ದರೆ ಮಂಕು ಆವರಿಸುತ್ತದೆ.

★ಬೆಳಗಿನ ಜಾವ ಬೇಗ ಏಳವುದು.

★ಓದಲು ಕುಳಿತಾಗ 5ನಿಮಿಷ ದ್ಯಾನ ಮಾಡಿ.

★ನಿಮ್ಮ ಅಂಗೈಗಳನ್ನು ಚನ್ನಾಗಿ ಉಜ್ಜಿಕೊಂಡು ಕಣ್ಣುಗಳ ಮೇಲಿಟ್ಟುಕೊಳ್ಳಿ.

★ವೇಳಾ ಪತ್ರಿಕೆಯಂತೆಯೇ ನಿಮ್ಮ ಓದು ಇರಲಿ.

★ಓದಿದ್ದನ್ನು ನಿಮ್ಮ ಸ್ಮೃತಿ ಪಟಲಕ್ಕೆ ತೆಗೆದುಕೊಂಡು ಮುಖ್ಯಾಂಶಗಳನ್ನು ಬರೆದು ತೆಗೆಯಿರಿ.

★ಓದಿನ ನಡುವೆ ಬೇಸರವೆನಿಸಿದಾಗ ವಿರಾಮ ತೆಗೆದುಕೊಳ್ಳಿ.ಚಿತ್ರಗಳು/ನಕ್ಷೆಗಳು,ಕಂಠಪಾಠದಂತಹ ಚಟುವಟಿಕೆ ಮಾಡಿ ಮತ್ತೆ ಓದಲು ಪ್ರಾರಂಭಿಸಿ.( Rest means change of work )

★ನಿಮ್ಮ ಪಾಠಗಳನ್ನು ಮನಸ್ಸಿನಲ್ಲಯೇ ಊಹಿಸಿಕೊಳ್ಳಿ.

★ಫಾರ್ಮುಲಾಗಳನ್ನು,ಚಿತ್ರಗಳನ್ನು,ನಕ್ಷೆಗಳನ್ನು ದೊಡ್ಡದಾಗಿ ಬರೆದು ಓದುವಾಗ ನಿಮ್ಮ ಕಣ್ಣಿಗೆ ಕಾಣುವಂತೆ ಇಟ್ಟುಕೊಳ್ಳಿ.

★ಕಷ್ಟವಾಗಿರುವುದನ್ನು ಮೊದಲು ಓದಿ.ಏಕೆಂದರೆ ಅದು ನಿಮಗೆ ಇಷ್ಟದ ವಿಷಯ ಆಗಬೇಕಿದೆ.

★ಕಷ್ಟದ ವಿಷಯ ಎಂದು ನಾಳೆ ಮುಂದೂಡಬೇಡಿ.

★ಅಗತ್ಯವೆನಿಸಿದರೆ ನಿಮ್ಮ ಗೆಳೆಯ/ಗೆಳತಿ ಶಿಕ್ಷಕರ ಸಲಹೆ ಪಡೆಯಿರಿ.

## ಪರೀಕ್ಷೆಯ ಚಿಂತೆ / ಭಯ ಹೋಗಲಾಡಿಸಲು ಇವುಗಳನ್ನು ನೆನಪಿನಲ್ಲಿಡಿ.

★ನಕಾರಾತ್ಮಕ ವಿಚಾರ ಬೇಡ. ಉದಾ : ಉತ್ತರ ಪತ್ರಿಕೆಯಲ್ಲಿ ಬರೆಯುವಾಗ ನನಗೆ ಏನು ನೆನಪಿಗೆ ಬರಲಿಕ್ಕಿಲ್ಲ, ನೆನಪು ಬಾರದಿದ್ದರೆ ಹೇಗೆ? ಎಂಬಿತ್ಯಾದಿ ನಕಾರಾತ್ಮಕ ವಿಚಾರ ಮನಸ್ಸಿನಲ್ಲಿ ಬಂದರೆ ತಂದೆ,ತಾಯಿ,ಅಣ್ಣ,ಅಕ್ಕ ಅಥವಾ ಶಿಕ್ಷಕರಿಗೆ ತಿಳಿಸಿ ಸಲಹೆ ಪಡೆಯಿರಿ.


★ಮತ್ತೊಬ್ಬರಿಗೆ ಹೋಲಿಕೆ ಮಾಡಿಕೊಳ್ಳಬೇಡಿ. **I am the best, I am hero/heroin** ಎಂಬ ಭಾವ ನಿಮ್ಮದಾಗಿರಲಿ.

★ಪರೀಕ್ಷೆಯಲ್ಲಿ ಸಿಗುವ ಅಂಕಗಳೆ ಸರ್ವಸ್ವವೆಂದು ತಿಳಿಯಬೇಡಿ.

★ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆ ಬಿಡಿಸಿ ಅದರಿಂದ ಆತ್ಮ ವಿಶ್ವಾಸ ಬೆಳೆಯುವುದು.

★ಪರೀಕ್ಷಾ ಮುನ್ನಾ ದಿನ ಯಾವುದೇ ಕಾರಣಕ್ಕೂ ಒತ್ತಡದಿಂದ ಉದ್ವೇಗದಿಂದ ಓದಬೇಡಿ,ಮನಸ್ಸು ದೂಷಿತವಾಗುವಂತ ಯಾವುದೇ ಚಲನಚಿತ್ರಗಳನ್ನು, ಪ್ರಸಂಗಗಳನ್ನು ನೋಡಬೇಡಿ.

★ಪರೀಕ್ಷೆಯ ಮುಂಚೆ ಸಾಧ್ಯವಾದಷ್ಟು ಆನಂದದ ಕ್ಷಣಗಳನ್ನು ಅನುಭವಿಸಿ ನಿಶ್ಚಿಂತೆಯಿಂದ ಇರಿ.





# ಧನ್ಯವಾದಗಳು

